# ‘ಕಾಮಿಡಿ ಜಾನರ್ ನನಗೆ ಇಷ್ಟ



**ಜೀವಿತಾ ವಸಿಷ್ಠ**
ಸ್ಟಾರ್ ಸುವರ್ಣದ ‘ಶ್ರೀ ದೇವೀ ಮಹಾತ್ಮೆ’ ಪಾರ್ವತಿ

◆ **ಜೀವನ ನಟನೆಯತ್ತ ತಿರುಗಿದ್ದು ಹೇಗೆ?**

ದಕ್ಷಿಣ ಕನ್ನಡದ ಪುತ್ತೂರು ನಮ್ಮ ಮೂಲ ನೆಲೆ. ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದಿದ್ದು. ಡಾನ್ಸ್ ಅಭ್ಯಾಸ ಮಾಡಿ ಶಾಲೆಯೊಂದರಲ್ಲಿ ಡಾನ್ಸ್ ಶಿಕ್ಷಕಿಯಾಗಿ ಕೆಲಸ ಮಾಡ್ತಾ ಇದ್ದೆ. ಮೂಲತಃ ನಾನು ಶಿಕ್ಷಕಿ. 2020ರ ಲಾಕ್ ಡೌನ್ ಅವಧಿಯಲ್ಲಿ ‘ವಾಸಂತಿ ನಲಿದಾಗ’ ಎಂಬ ಸಿನಿಮಾಕ್ಕೆ ಆಡಿಷನ್ ಬಂತು. ಪ್ರಯೋಗಶೀಲ ಮನಸ್ಸಿನಿಂದಲೇ ಪ್ರಯತ್ನ ಮಾಡಿದೆ. ಆಯ್ಕೆಯೂ ಆಯಿತು. ನಂತರ ‘ಅಪ್ಪ ಐ ಲವ್‌ಯು’, ಅದಾದ ಮೇಲೆ ಕೆಲವು ಸಿನಿಮಾಗಳಲ್ಲಿ ಮಾಡಿದೆ. ಭಿನ್ನ ಭಾವಗಳನ್ನು ಪ್ಲೇ ಮಾಡಲು ಸಾಧ್ಯ ಆಯಿತು. ಸೀರಿಯಲ್ ಅಂತ ಇದೇ ಮೊದಲು. ಇದಕ್ಕೆ ಆಡಿಷನ್ ನೀಡಿದ ಮೊದಲಿಗಳು ನಾನೇ ಆಯ್ಕೆ ಆದೆ ಎನ್ನುವುದು ಖುಷಿ ಕೊಡ್ತು. ಶಿವರಾತ್ರಿ ದಿನವೇ ನನ್ನನ್ನು ಆಯ್ಕೆ ಮಾಡಿದ್ದಾಗಿ ತಿಳಿಸಿದರು. ಸೀರಿಯಲ್ ಈಗಷ್ಟೇ ಆರಂಭವಾಗಿದೆ.

◆ **ಪೌರಾಣಿಕ ಪಾತ್ರ ಹೇಗೆನಿಸುತ್ತಿದೆ? ಇಂತಹ ಕಥೆ ಈಗಾಗಲೇ ಬಂದಿದೆ ಅನ್ನಿಸುವುದಿಲ್ಲವೇ?**

ದೇವಿಯನ್ನು ಕೇಂದ್ರವಾಗಿ ಇಟ್ಟುಕೊಂಡು ಈ ಕಥೆಯನ್ನು ರೂಪಿಸಿದ್ದಾರೆ. ‘ಹರಹರ ಮಹಾದೇವ’ ರೀತಿನೇ ಅನ್ನಿಸಬಹುದು, ಅದಕ್ಕೆ ಸಂಬಂಧವಿಲ್ಲ, ಭಿನ್ನವಾಗಿದೆ. ಇಲ್ಲಿ ದೇವಿಯ ಮಹಿಮೆ ಮತ್ತು ಅವತಾರಗಳು ಮುಖ್ಯ ಆಗಬಹುದು. ಇದರಲ್ಲಿ ಸತಿ, ಪಾರ್ವತಿ, ಕಾಳಿ ಸೇರಿದಂತೆ ದೇವಿಯ ಬೇರೆ ಬೇರೆ ಮುಖಗಳ ದರ್ಶನ ಆಗಲಿದೆ.

ಪೌರಾಣಿಕ ಆಗಿದ್ದರಿಂದ ಭಾಷೆಯ ಮೇಲಿನ ಹಿಡಿತ ತುಂಬ ಚೆನ್ನಾಗಿ ಇರಲೇಬೇಕು. ಇದಕ್ಕೆ ಭಾಷೆಯೇ ದೊಡ್ಡ ಶಕ್ತಿ. ನುಡಿಯ ಉಚ್ಚರಣೆಯಲ್ಲಾಗಲಿ ನಟನೆಯಲ್ಲಾಗಲಿ ಹೀಗೇ ಇರಬೇಕು ಎಂಬ ಸ್ಪಷ್ಟತೆ ಇದೆ. ಸ್ವಲ್ಪವೂ ತಪ್ಪಾಗದಂತೆ ತಂಡದ ಸದಸ್ಯರು ನೋಡಿಕೊಳ್ಳುತ್ತಿದ್ದಾರೆ. ಆರಂಭದಲ್ಲಿ ನಿಜಕ್ಕೂ ಕಷ್ಟ ಆಯಿತು. ಏಕೆಂದರೆ ನಟನೆಯನ್ನು ಕಲಿತು ಬಂದವಳಲ್ಲ ನಾನು. ರಂಗಭೂಮಿ ಚಟುವಟಿಕೆಯಲ್ಲೂ ತೊಡಗಿದವಳಲ್ಲ. ಆದರೂ ನಟನೆಯನ್ನು ಚೆನ್ನಾಗಿ ಮಾಡ್ತೀನಿ, ಡೈಲಾಗ್ ಕೂಡ ಹೇಳ್ತೀನಿ. ತರಬೇತಿ ಇಲ್ಲದೆ ಇರುವುದು ಇಲ್ಲಿ ಕಷ್ಟ ಆಯಿತು. ಕನ್ನಡಿಗಳಾದ ನನಗೆ ಭಾಷೆಯ ಸೊಗಸನ್ನು ಅರಿಯುವ ಅವಕಾಶ ಇಲ್ಲಿ ಸಿಕ್ಕಿದೆ. ಸ್ಪಷ್ಟ ಕನ್ನಡ ಪದಗಳ ಅರ್ಥಾಂತರ ಬೆರಗನ್ನು ಹುಟ್ಟಿಸಿದೆ. ನನ್ನ ಭಾಷೆ ಕೂಡ ಹುಲುಸಾಗಿ ಬೆಳವಣಿಗೆ ಆಗುತ್ತಿದೆ.

◆ **ಮುಂದೆ ಎಂತಹ ಪಾತ್ರವನ್ನು ನೀವು ನಿರೀಕ್ಷೆ ಮಾಡುತ್ತೀರಿ?**

ಸಿನಿಮಾ ಮೂಲಕ ಅಭಿನಯ ರಂಗಕ್ಕೆ ಬಂದಿದ್ದೇನೆ. ಸೀರಿಯಲ್ ಜೊತೆ ಸಿನಿಮಾಗಳಿಗೆ ಮತ್ತೆ ಅವಕಾಶ ಸಿಕ್ಕರೆ ಅಲ್ಲೂ ಮಾಡಬೇಕು ಎನ್ನುವ ಯೋಚನೆ ಇದೆ. ಪಾರ್ವತಿ ನನ್ನದಲ್ಲದ ಜಾನರ್. ನನ್ನದೇ ಜಾನರ್‌ನಲ್ಲಿ ಮುಂದೆ ಕಾಣಿಸಿಕೊಳ್ಳಬೇಕು ಎನ್ನುವ ಕನಸಿದೆ. ನನಗೆ ಕಾಮಿಡಿ ಥ್ರಿಲ್ಲರ್ ತುಂಬ ಇಷ್ಟ. ಬೇರೆ ಬೇರೆ ಪಾತ್ರಗಳನ್ನು ಮಾಡಬೇಕು. ಸಿನಿಮಾದಲ್ಲಿ ನೆಗೆಟಿವ್ ಪಾತ್ರ ಮಾಡಿದ್ದೇನೆ. ಈಗ ಅತ್ಯಂತ ಸುಂದರ ಮತ್ತು ಮುಗ್ಧ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಸವಾಲಿನ ಪಾತ್ರಗಳು ಇಷ್ಟ. ನಟನೆ ನನ್ನ ವೃತ್ತಿಯಾಗಿರುವುದರಿಂದ ಯಾವ ಪಾತ್ರವನ್ನಾದರೂ ಮಾಡಬಲ್ಲೆ.

◆ **ಸಿನಿಮಾ ಮತ್ತು ಧಾರಾವಾಹಿಗಳ ಅಂತರದ ಬಗ್ಗೆ ಹೇಳುವುದಾದರೆ...**

ಸೀರಿಯಲ್–ಸಿನಿಮಾ ಬೇರೆಯೇ ಮಾರ್ಗ. ಕೆಲವರು ಸಿನಿಮಾದಲ್ಲಿ ಅವಕಾಶ ಇದ್ದೂ ಸೀರಿಯಲ್‌ಗೆ ಏಕೆ ಬಂದಿದ್ದು ಎಂದೂ ಕೇಳಿದ್ದಾರೆ. ಇಂತಹ ಪಾತ್ರ ಅಷ್ಟು ಸುಲಭಕ್ಕೆ ಸಿಗುವುದಿಲ್ಲ ಎಂದೇ ಅವರಿಗೆ ಹೇಳುತ್ತೇನೆ. ಅಂತೆಯೇ ಈ ಪಾತ್ರಕ್ಕೆ ಅದೃಷ್ಟ ಮಾಡಿದ್ದೇನೆ ಎಂದು ಅನೇಕರು ಹೇಳಿದ್ದಾರೆ. ನನ್ನ ಅಮ್ಮ, ಅಣ್ಣ ಕೂಡ ಈ ರೀತಿಯ ಪಾತ್ರ ಮಿಸ್ ಮಾಡಿಕೊಳ್ಳಬೇಡ ಎಂದು ಹುರಿದುಂಬಿಸಿದ್ದಾರೆ. ಸಿನಿಮಾಗಳಲ್ಲಿ ಸಾಕಷ್ಟು ಸಮಯ ಸಿಗುತ್ತೆ. ನಟನೆಯ ವಿಷಯದಲ್ಲಿ ಎರಡೂ ಒಂದೆ. ಆದರೆ ಡೈಲಾಗ್ ಹೇಳುವ ರೀತಿ ನೀತಿಯಲ್ಲಿ ವ್ಯತ್ಯಾಸ ಇದೆ. ಸೀರಿಯಲ್‌ಗೆ ದಿನವಿಡೀ ದುಡಿಯಬೇಕು. ನಿದ್ದೆಗೂ ಸಿಗುವ ಸಮಯ ಕಡಿಮೆ. ಬೆಳಿಗ್ಗೆ ಎದ್ದೋಡಿದರೆ ಮನೆ ಸೇರುವುದು ರಾತ್ರಿಯಾಗುತ್ತದೆ. ಬಿಜಿ ಇರುವುದು ನನಗೆ ಇಷ್ಟವೇ. ಹಾಗಾಗಿ ಇದನ್ನೂ ಎಂಜಾಯ್ ಮಾಡುತ್ತಿದ್ದೇನೆ.

■ **ರಾಘವೇಂದ್ರ ಕೆ.**